International Journal of Kannada Research
www.kannadajournal.com

ISSN: 2454–5813
IJKR 2018; 4(3): 144-146
© 2018 IJKR
www.kannadajournal.com
Received: 25-05-2018
Accepted: 26-06-2018

**ಶ್ರೀ ಉದಯಕುಮಾರ ಎಸ್ ಅರಬಗಟ್ಟೆ**
ಅರಬಗಟ್ಟೆ ಅಂಚೆ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ,

**Correspondence**
**ಶ್ರೀ ಉದಯಕುಮಾರ ಎಸ್ ಅರಬಗಟ್ಟೆ**
ಅರಬಗಟ್ಟೆ ಅಂಚೆ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ,

# ಹೊನ್ನಾಳಿ ತಾಲ್ಲೂಕಿನ ಸ್ಥಳನಾಮಗಳಲ್ಲಿ ಪ್ರಾದೇಶಿಕ ಸಂಸ್ಕೃತಿ

**ಶ್ರೀ ಉದಯಕುಮಾರ ಎಸ್ ಅರಬಗಟ್ಟೆ**

ಪ್ರಾಚೀನ ಕಾಲಘಟ್ಟಗಳಲ್ಲಿ ಹುಟ್ಟಿಕೊಂಡಿರುವ ಗ್ರಾಮಗಳಿಗೆ ಅಂಟಿಕೊಂಡು ಬಂದಿರುವ ನಾಮಗಳಲ್ಲಿ ನಾಮ, ರೂಪ, ಕ್ರಿಯೆಗಳಲ್ಲಿ ವ್ಯಾತ್ಯಾಸಗಳು ಕಂಡುಬರುತ್ತವೆ. ಅವುಗಳಿಗೆ ಕಾರಣ ಏನೇ ಇರಲಿ, ಇತಿಹಾಸ ಪೂರ್ವಕಾಲದಲ್ಲಿ ಮಾನವ ಒಂದೆಡೆ ನೆಲೆ ನಿಲ್ಲಲು ಪ್ರಾರಂಭಿಸುವುದಕ್ಕೂ ಮೊದಲು ಸಂಚಾರಿ ಜೀವನ ನಡೆಸುತ್ತಿದ್ದನು. ನಂತರ ಅವನಿಗೆ ತಿಳುವಳಿಕೆ ಬಂದಾಗ ಒಂದೆಡೆ ನೆಲೆ ನಿಲ್ಲಲು ಪ್ರಾರಂಭಿಸಿದನು ವ್ಯವಸಾಯ ಮಾಡುತ್ತಾ ಹೋದಂತೆ ಒಂದೆಡೆ ನೆಲೆ ನಿಂತಾಗ ಅವುಗಳು ಗ್ರಾಮಗಳಾದವು, ಇದಕ್ಕೆ ಮೂಲ ಕಾರಣ ವ್ಯವಸಾಯ ಪದ್ಧತಿ. ಇದೇ ರೀತಿ ಬೇರೆ ಬೇರೆ ಜನಾಂಗದವರು ಬೇರೆ ಬೇರೆ ಸ್ಥಳಗಳಲ್ಲಿ ನೆಲೆ ಕಟ್ಟಿಕೊಂಡಿದ್ದಾರೆ ಆಗ ಅವುಗಳು ಸಹ ಗ್ರಾಮಗಳಾಗಿದ್ದಾವೆ. ನೆಲೆ ನಿಂತ ನಂತರ ಉದ್ಯೋಗಕ್ಕಾಗಿ ಒಂದೊಂದು ವೃತ್ತಿಯನ್ನು ಮಾಡಲು, ಸಾಮಾಜಿಕ ರಕ್ಷಣೆಗಾಗಿ ಒಂದೊಂದು ಕಡೆ ಒಟ್ಟಾಗಿ ಜೀವನ ಮಾಡಲು ಪ್ರಾರಂಭಿಸಿದ್ದಾರೆ. ಇವುಗಳೆ ಮುಂದೆ ವಿವಿಧ ರೀತಿಯ ಗ್ರಾಮಗಳಾಗಿ ಬೆಳೆಯಲಾರಂಭಿಸಿವೆ.

ಕೆಲವು ಗ್ರಾಮಗಳು ಅವುಗಳೇ ಸ್ವಯಾರ್ಜಿತವಾಗಿ ಹುಟ್ಟಿಕೊಂಡರೆ, ಇನ್ನೂ ಕೆಲವು ಜನಗಳಿಂದ ಸೃಷ್ಟಿಯಾಗಿವೆ. ಮೊದಲನೆಯದು ಅಲೆಮಾರಿ ಜೀವನ ಬಿಟ್ಟು ಒಂದೆಡೆ ನೆಲೆ ನಿಂತು ತಮಗೆ ಗೊತ್ತಿಲ್ಲದಂತೆ ಅಲ್ಲಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಹಾಗೂ ಬೇರೆಯವರು ಅಲ್ಲಿಗೆ ಬಂದು ಸೇರಬಹುದು, ಜೊತೆಗೆ ಅಲ್ಲಿಯ ವಾತವರಣಕ್ಕೆ ಒಗ್ಗಿಕೊಳ್ಳುವುದು, ಅನಿವಾರ್ಯವಾಗಿ ಅಲ್ಲಿಯೇ ಒಂದು ನೆಲೆಯ ರೂಪ ಕೊಂಡುಕೊಳ್ಳುತ್ತಿದ್ದರು. ಅದಕ್ಕೆ ಅಲ್ಲಿಯ ಪ್ರದೇಶದ ಅಥವಾ ಜನಾಂಗದ ಹೆಸರು ಗ್ರಾಮದ ಹೆಸರಾಗಿ ಹುಟ್ಟಿಕೊಂಡಿದೆ. ಇದರಲ್ಲಿ ಯಾವುದೇ ಉದ್ದೇಶಗಳಿರುತ್ತಿರಲಿಲ್ಲ ಇವೆಲ್ಲ ಸ್ವಯಂ ಸೃಷ್ಟಿ ವರ್ಗಕ್ಕೆ ಸೇರಿದ ಗ್ರಾಮಗಳಾಗಿವೆ. ಆದರೆ ಕಾಲ ಬದಲಾದಂತೆ ಗ್ರಾಮಗಳು ಜೀವನ ಮಾಡಲು ಅನುಕೂಲ ಒದಗಿಸುತ್ತವೆ ಎಂದು ಅರಿವಾದಾಗ ಕೆಲವು ಉದ್ದೇಶದಿಂದ ಗ್ರಾಮಗಳು ಹುಟ್ಟಿಕೊಂಡವು, ಇವೆಲ್ಲಾ ಜನರ ಸೃಷ್ಟಿ ಗ್ರಾಮಗಳಾಗಿವೆ. ಇವುಗಳಲ್ಲಿ ಕೆಲವು ಆಚರಣೆಗಳ ವಿಧಿ ವಿಧಾನಗಳನ್ನು ಆಚರಿಸುವ ಉದ್ದೇಶಗಳೇ ಹೆಚ್ಚಿನ ಪ್ರಮುಖಾಂಶಗಳಾಗಿವೆ. ಈ ರೀತಿಯ ಎರಡು ಬಗೆಯ ಊರುಗಳು ಹುಟ್ಟಿಕೊಂಡು ಅವುಗಳ ಸ್ಥಳ, ಉದ್ಯೋಗ ಇತರೆ ಅಂಶಗಳನ್ನು ಗಮನಿಸಿ ಗ್ರಾಮ, ನಗರ, ಖೇಡ, ಕಟ್ಟೆ, ಪಟ್ಟಣ ಇನ್ನೂ ಹೆಚ್ಚಿನ ಹೆಸರುಗಳನ್ನು ಪ್ರಾಚೀನ ಜನರು ಹೆಸರಿಟ್ಟು ಕರೆದರು.

ಸಂಸ್ಕೃತಿಗೆ ಸಂಬಂಧಿಸಿದಂತೆ ಭೌಗೋಳಿಕ, ಪೌರಾಣಿಕ, ಧಾರ್ಮಿಕ, ಐತಿಹಾಸಿಕ, ಆಡಳಿತ, ಸಾಮಾಜಿಕ ಅಂಶಗಳನ್ನು ತಿಳಿಯಬೇಕಾಗುತ್ತದೆ. ಭೂಮಿಯ ಮೇಲೆ ಜನವಸತಿ ಹಾಗೂ ಬೇಚಾರಕ್ ಎಂಬ ಎರಡು ರೀತಿಯ ಗ್ರಾಮಗಳು ಕಂಡು ಬರುತ್ತವೆ. ಈ ಬೇಚಾರಕ್ ಗ್ರಾಮಗಳಿಗೆ ಮನುಷ್ಯ ಹಳ್ಳ, ಗಿರಿ, ಸರ, ಸಾಗರ, ದಿಣ್ಣೆ, ಕೊಳ್ಳಗಳಲ್ಲಿ ವಿಶೇಷವಾದವುಗಳನ್ನ ಹೆಸರಿಟ್ಟಿದ್ದಾನೆ. ಆದರೆ ಜನವಸತಿ ಗ್ರಾಮಗಳಿಗೆಲ್ಲ ವಿಶೇಷ ಹೆಸರುಗಳನ್ನೆ ಕರೆದುಕೊಂಡಿದ್ದಾನೆ. ಆದ್ದರಿಂದ ಪ್ರಪಂಚದಲ್ಲಿ ಹೆಸರಿಲ್ಲದ ಊರುಗಳೇ ಇಲ್ಲವಾಗಿವೆ. ಮೊದಮೊದಲು ಸ್ವಯಂ ಸೃಷ್ಟಿಗ್ರಾಮಗಳಿಗೆ ಮಾನವ ಅಲ್ಲಿನ ವಾತವರಣದ ಹೆಸರನ್ನೇ ಇಡುತ್ತಿದ್ದನು. ಉದಾಹರಣೆಗೆ ಬೀಜೋಗಟ್ಟೆ, ಬಿದರಗಡ್ಡೆ, ಕೆಂಪು ಮಣ್ಣಿನಿಂದ ಕೆಂಗಲಹಳ್ಳಿ, ಬೆಳಲಕಟ್ಟೆ, ಅಂದರೆ ಗ್ರಾಮದ ಸ್ಥಳನಾಮಗಳಲ್ಲಿ ಅಲ್ಲಿನ ಪರಿಸರ ಪ್ರತಿಬಿಂಬಿಸುತ್ತಿತ್ತು. ಆದರೆ ಇಂತಹ ಹೆಸರುಗಳು ಬೇರೆ ಊರುಗಳ ಜನರು ಆ ಸ್ಥಳವನ್ನು ಗುರುತಿಸಲು ಈ ರೀತಿ ಹೆಸರನ್ನು ಇಡುತ್ತಿದ್ದರೇ ವಿನಃ ಆ ಹಳ್ಳಿ ಜನರಿಂದ ಮೇಲಿನ ಹೆಸರುಗಳು ಬಂದವುಗಳು ಅಲ್ಲ. ಜನವಸತಿ ಗ್ರಾಮಗಳಿಗೆ ಅವನೇ ನಿರ್ಮಾಣ ಮಾಡಿದ ಗ್ರಾಮಗಳಾದ್ದರಿಂದ ಹೆಚ್ಚಾಗಿ ಪರಿಸರದ ಹೆಸರುಗಳ ಬದಲು ಅಲ್ಲಿನ ಜನಾಂಗಗಳು, ಪ್ರಮುಖ ವ್ಯಕ್ತಿಗಳು, ಆದರ್ಶಳಿಗೆ ಅನುಗುಣವಾಗಿ ಹೆಸರಿಡಲಾರಂಭಿಸಿದರು. ಉದಾಹರಣೆಗೆ ಗಂಗನಕೋಟೆ, ಕಮ್ಮಾರಗಟ್ಟೆ, (ಜನಾಂಗ) ರಾಮೇಶ್ವರ, ದೇವನಾಯಕನಹಳ್ಳಿ, (ವ್ಯಕ್ತಿ) ಮುಕ್ತೇನಹಳ್ಳಿ, ತ್ಯಾಗದಕಟ್ಟೆ.

(ಆದರ್ಶ) ಇಲ್ಲಿ ಮೇಲಿನ ಎಲ್ಲಾ ಗ್ರಾಮನಾಮಗಳನ್ನ ಸ್ವಾಭಾವಿಕನಾಮಗಳು, ಕೃತಕನಾಮಗಳೂ ಎಂತಲೂ ಕರೆಯಬಹುದಾಗಿದೆ.

ಕಾಲ ಬದಲಾದಂತೆ ಜನರು ನಿಸರ್ಗಕ್ಕಿಂತ ಜನಾಂಗಗಳ ಮೇಲೆ ಹೆಚ್ಚಿನ ಆಸ್ಥೆ ಹುಟ್ಟಿ ನಿಸರ್ಗವಾಚಿ ಬದಲು ಜನಾಂಗವಾಚಿ ನಾಮಗಳಿಗೆ ಒಲವು ತೋರಿದ್ದಾರೆ. ಇದಕ್ಕೆ ಪೂರಕವಾಗಿ ಹೊನ್ನಾಳಿ ತಾಲ್ಲೂಕಿನಲ್ಲಿ ಅನೇಕ ಗ್ರಾಮ ನಾಮಗಳು ಹುಟ್ಟಿಕೊಂಡಿವೆ. ಅವುಗಳಿಂದ ಪ್ರಾಚೀನ ಕಾಲದಲ್ಲಿ ವಿವಿಧ ಜನಾಂಗಗಳು ವಾಸವಿದ್ದ ಸ್ಥಳನಾಮಗಳೆಂದರೆ, ಕೊಡಚಗೊಂಡನ+ಹಳ್ಳಿ, ಒಡೆಯರ+ಹತ್ತೂರು, ಸೇವಾಲಾಲ್+ನಗರ, ಗೊಲ್ಲರ+ಹಳ್ಳಿ, ಗೋಣಿ+ಗೆರೆ, ಕಮ್ಮಾರ+ಘಟ್ಟ, ವಡ್ಡರ+ಹಟ್ಟಿ, ಇಸ್ಲಾಂ+ಪುರ, ಕಂಚುಗಾರನ+ಕೇರಿ, ಗೊರವರ+ಹಟ್ಟಿ, ದಾಸರ+ಹಟ್ಟಿ, ಇಲ್ಲಿ ಜನಾಂಗವಾಚಿ ಪದವು ಗ್ರಾಮ ನಾಮದ ನಿರ್ದಿಷ್ಟ ಸ್ಥಾನದಲ್ಲಿರುತ್ತದೆ. ಮಾನವ ಜನಾಂಗೀಯ ಪ್ರತಿಷ್ಠೆಗಿಂತ ಕಾಲನಂತರ ವ್ಯಕ್ತಿ ಪ್ರತಿಷ್ಠೆಯ ಕಡೆಗೆ ಹೊರಳಿದ ಆಗ ಅವನು ಹಿರಿಯರ ಹೆಸರು, ತನ್ನ ಹೆಸರು, ಸಂಬಂಧಿಕರ ಹೆಸರುಗಳನ್ನ ಇಡತೊಡಗಿದನು ಅಂತಹವುಗಳೆಂದರೆ ಕೆಂಚಿಯ+ಕೊಪ್ಪ, ಮಾದೇನ+ಹಳ್ಳಿ, ಸೋಮನ+ಮಲ್ಲಾಪುರ, ದೇವನಾಯಕನ+ಹಳ್ಳಿ, ಕೊನನಾಯಕನ+ಹಳ್ಳಿ, ಬೈರನ+ಹಳ್ಳಿ, ಅಕ್ಕತಂಗಿಯರ+ಕಟ್ಟೆ, ಇತ್ತೀಚೆಗೆ ಮುಂದುವರೆದು ಹಳ್ಳಿಯ ಓಣಿಗಳಿಗೆ ಪ್ರದೇಶಗಳಿಗೆ ಮಹಾನ್ ವ್ಯಕ್ತಿಗಳ ಹೆಸರನ್ನು ಇಡುವ ವಾಡಿಕೆ ಇದೆ.ಇನ್ನೂ ಕುತೂಹಲದ ಸಂಗತಿಗಳೆಂದರೆ ದೇವರುಗಳಿಗೂ ಸಹ ಪ್ರತಿಷ್ಠಾಪನೆ ಮಾಡಿದ ವ್ಯಕ್ತಿಯ ಹೆಸರನ್ನು ಇಟ್ಟಿರುವುದನ್ನು ಗಮನಿಸಬಹುದಾಗಿದೆ. ಇಲ್ಲಿ ವ್ಯಕ್ತಿವಾಚಿ ಪದವು ಗ್ರಾಮ ನಾಮದ ನಿರ್ದಿಷ್ಟ ಸ್ಥಾನದಲ್ಲಿರುತ್ತದೆ.

ಒಂದು ಪ್ರದೇಶದ ಗ್ರಾಮನಾಮಗಳಲ್ಲಿ ಆಕೃತಿಯ ದೃಷ್ಟಿಯಿಂದ ಪ್ರಾದೇಶಿಕ ವೈಶಿಷ್ಟ್ಯ ಕಂಡುಬರುತ್ತದೆ. ಜನರ ಭಾವನೆಗಳು, ನದಿ, ಬೆಟ್ಟ, ಕಾಡು, ದಿಣ್ಣೆ, ಹಳ್ಳ, ಕೆರೆ, ಹೊಳೆ, ಅರಣ್ಯ ಇಂತಹ ನೈಸರ್ಗಿಕ ಅಂಶಗಳು ಇಲ್ಲಿ ಕೆಲಸ ಮಾಡುತ್ತವೆ. ಹೊನ್ನಾಳಿ ತಾಲ್ಲೂಕಿನ ಸ್ಥಳನಾಮಗಳ ಬಗ್ಗೆ ಹೇಳುವುದಾದರೆ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ ಸ್ಥಳನಾಮಗಳು ಇವೆ, ಇವುಗಳು ಹಳೆಯ, ಹೊಸ, ಇನ್ನೂ ಹಳೆಯ ನಾಮಗಳು ಎಂಬುದನ್ನು ತೋರ್ಪಡಿಸುತ್ತವೆ. ಸ್ಥಳನಾಮಗಳ ರೂಪಗಳಿಂದ ಪ್ರಾದೇಶಿಕ ಸಾಂಸ್ಕೃತಿಕ ಅಂಶಗಳು ಕಂಡುಬರುತ್ತವೆ. ಉದಾ: ಗುಡ್ಡ, ಕಲ್ಲು, ಊರು, ಕಟ್ಟೆ, ವಾಡಿ, ಎಂಬ ವಾರ್ಗಿಕಗಳ ನಾಮಗಳೇ ಹೆಚ್ಚು. ಅಂದಹಾಗೆ ಸಂಸ್ಕೃತಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಸಾಂಸ್ಕೃತಿಕ ಅಂಶಗಳನ್ನು ನೋಡಬಹುದಾಗಿದೆ. ಸವಳಂಗದ ಕೆರೆಯಲ್ಲಿ ಹೆಚ್ಚು ಚೌಳು ಸಿಗುತ್ತಿದ್ದರಿಂದ ಸವಳಂಗ ಎಂಬ ಹೆಸರು ಬಂದಿದೆ. ತುಂಗಭದ್ರ ನದಿಯ ದಡದ ಮೇಲಿರುವ ಊರಿಗೆ ದಡಗೂರು> ದಿಡಗೂರು ಆಗಿದೆ. ನೀರಿನಿಂದ ಸುತ್ತುವರೆದ ದ್ವೀಪ ಪ್ರದೇಶಕ್ಕೆ ಕುರುವ ಎಂದು ಕರೆಯಲಾಗಿದೆ. ಗುಡ್ಡದ ಹತ್ತಿರ ಇರುವ ಊರಿಗೆ ಗುಡ್ಡೆಹಳ್ಳಿ ಎಂದು ಕರೆಯಲಾಗಿದೆ.ಅತ್ಯಂತ ತಗ್ಗು ಪ್ರದೇಶದಲ್ಲಿರುವ ಊರಿಗೆ ತಗ್ಗಿಹಳ್ಳಿ ಎಂದು ಕರೆಯಲಾಗಿದೆ. ಅತ್ಯಂತ ಹೆಚ್ಚು ಎರೆ ಭೂಮಿಯನ್ನು ಹೊಂದಿರುವ ಗ್ರಾಮಕ್ಕೆ ಎರೆಹಳ್ಳಿ ಎಂದು ಕರೆಯಲಾಗಿದೆ. ಈ ಹಿಂದೆ ಹೊನ್ನಾಳಿ ಮಲೆನಾಡಿನ ಪ್ರದೇಶವಾದ್ದರಿಂದ ಅತ್ಯಂತ ಹೆಚ್ಚಿನ ಮರಗಿಡಗಳನ್ನು ಹೂಗಿಡಗಳನ್ನ ಹೊಂದಿತ್ತು ಎನ್ನುವುದಕ್ಕೆ ಸುರಹೊನ್ನೆ, ಮಲ್ಲಿಗೆನಹಳ್ಳಿ, ಮಾವಿನಕೋಟೆ, ಬಿದರಳ್ಳಿ, ಬಿದರಗಡ್ಡೆ, ಹುಣಸೆಹಳ್ಳಿ ಇವುಗಳೇ ಮೂಖಸಾಕ್ಷಿಯಾಗಿವೆ. ಯಾಕೆಂದರೆ ಹೊನ್ನಾಳಿ ಮಲೆನಾಡಿನ ಸೆರಗಿನ ತಾಲ್ಲೂಕಾಗಿರುವ ಕಾರಣ ಇದು ಸಹ ಮಲೆನಾಡಾಗಿತ್ತು ಎಂಬುದಕ್ಕೆ ಪುಷ್ಟಿ ನೀಡುತ್ತವೆ. ಪುರಾಣಗಳ ಪ್ರಕಾರ ಆಂಜನೇಯ ಪ್ರತಿಷ್ಠಾಪನೆಯಿಂದ ಹನುಮಸಾಗರ ವಾಗಿದೆ, ರಾಮ ದೇವರಿಗೆ ದತ್ತಿ ನೀಡಿದ ಹಳ್ಳಿಯಾದ ರಾಮಪುರ>ರಾಂಪುರ ವಾಗಿದೆ, ಬೆನಕನ ಆಕಾರದ ಬಂಡೆಯಿಂದ ಆ ಗ್ರಾಮ ಬೆನಕನಹಳ್ಳಿ ಯಾಗಿದೆ. ವ್ಯಕ್ತಿಯ ವಿಶಿಷ್ಟತೆಗಳಿಂದ ಸ್ಥಳನಾಮಗಳು ಉದ್ಭವಿಸುತ್ತವೆ ಎಂದು ಈ ಮೊದಲು ಹೇಳಿದಂತೆ ಇಂತಹ ಹೆಸರುಗಳು ಸ್ವಾಭಾವಿಕವಾಗಿ ಬಂದವುಗಳಲ್ಲ, ಯಾರದೋ ಒತ್ತಾಯದಿಂದ ಸ್ಥಳನಾಮಗಳಾಗಿ ಆದರೆ ಈಗ ಅವುಗಳೆ ಸಹಜವಾಗಿ ಹಾಗೆ ಉಳಿದುಬಿಡುತ್ತವೆ ಅವುಗಳೆಂದರೆ ಗಂಗನಕೋಟೆ, ಕಂಕನಹಳ್ಳಿ, ಮಲ್ಲಾಪುರ, ಕೆಂಚಿಕೊಪ್ಪ, ಮಾದೇನಹಳ್ಳಿ, ಸೋಮನಮಲ್ಲಾಪುರ, ದೇವನಾಯಕನಹಳ್ಳಿ, ಕೊನನಯಕನಹಳ್ಳಿ, ಬೈರನಹಳ್ಳಿ, ಅಕ್ಕತಂಗಿಯರಕಟ್ಟೆ. ಈ ಹಿಂದೆ ಹೇಳಿದಂತೆ ಉದ್ಯೋಗಕ್ಕಾಗಿ ಒಂದು ವೃತ್ತಿಯನ್ನು ಆರಂಭಿಸಿ ಅದೇ ವೃತ್ತಿಗಾರರ ಸಂಖ್ಯೆ ಹೆಚ್ಚಾದಾಗ ಅದೇ ವೃತ್ತಿಗೆ ತಳುಕ ಹಾಕಿಕೊಂಡು ಗ್ರಾಮನಾಮಗಳು ಹುಟ್ಟುತ್ತವೆ ಅಂತಹುಗಳೆಂದರೆ ಕಮ್ಮಾರಿಕೆ ಮಾಡುವ ಕಸುಬಿನವರು ಇರುವ ಊರು ಕಮ್ಮಾರಗಟ್ಟೆ, ಬಿದಿರಿನ ಕಡ್ಡಿಯಿಂದ ಕುಶಲ ಕೆಲಸ ಮಾಡುವವರಾದ ಕೊರಚರು ಇರುವ ಊರು ಕೊಡಚಗೊಂಡನಹಳ್ಳಿ ಯಾಯಿತು, ಕಂಚಿನ ಸಾಮಾನುಗಳನ್ನು ತಯಾರಿಸುವವರ ಊರು ಕಂಚುಗಾರನಹಳ್ಳಿ ಯಾಯಿತು. ಸಾಮಾನ್ಯ ಎತ್ತಿಗಿಂತಲೂ ಬಲು ದೊಡ್ಡದಾದ ಹಾಗೂ ಗಟ್ಟಿಮುಟ್ಟಾದ ಎತ್ತೊಂದು ಇದ್ದ ಗ್ರಾಮಕ್ಕೆ ದೊಡ್ಡೆತ್ತಿನಹಳ್ಳಿ ಎಂದು ಹೆಸರಾಯಿತು. ನಮ್ಮ ಸನಾತನ ಪುರಾಣಗಳು ಕಾವ್ಯಗಳು ಜನರ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿವೆ. ಇವು ಒಂದು ರೀತಿಯ ಸಾಂಸ್ಕೃತಿಕ ನಿಯಂತ್ರಕ ಗಳಾಗಿ ಕೆಲಸ ಮಾಡುತ್ತಾ ಬಂದಿವೆ. ರಾಮಾಯಣ, ಮಹಾಭಾರತ ಕಾವ್ಯಗಳು ರಾಜರುಗಳ ಕಥೆಯನ್ನು ಅರುಹುತ್ತಿದ್ದರು. ಪರಂಪರಾಗತ ಭಾರತೀಯ ನಂಬಿಕೆಯಂತೆ ಅವು ನಮಗೆ ಪುರಾಣ ಕಾವ್ಯಗಳೇ ಆಗಿವೆ ಅವುಗಳೆಂದರೆ ಹನುಮನಹಳ್ಳಿ, ಹನುಮಸಾಗರ, ರಾಮೇಶ್ವರ, ರಾಂಪುರ, ಗಡ್ಡೆರಾಮೇಶ್ವರ, ತೀರ್ಥರಾಂಪುರ. ಭಾರತೀಯ ಧರ್ಮಗಳಾದ ಹಿಂದೂ, ಭೌದ್ಧ, ಜೈನ್, ಸಿಖ್, ಶೈವ, ವೀರಶೈವ, ವೈಷ್ಣವ, ಧರ್ಮಗಳು ಸನಾತನ ಕಾಲದಿಂದಲೂ ಪ್ರಸಾರ ಹಾಗೂ ಪ್ರಚಾರತೆ ಪಡೆದಿವೆ. ತಾಲ್ಲೂಕಿನಲ್ಲಿ ಆಡಳಿತ ನಡೆಸಿದ ರಾಜರುಗಳು ಸರ್ವ ಧರ್ಮ ಸಹಿಷ್ಣವುಳ್ಳವರಾಗಿದ್ದು ಜನರ ಗೌರವಗಳಿಗೆ ಪಾತ್ರರಾಗಿದ್ದಾರೆ.ಎರಡು ಧರ್ಮಗಳ ಮಧ್ಯ ಇರುವ ವ್ಯಾಜ್ಯಗಳನ್ನ ರಾಜರು ಇತ್ಯರ್ಥಪಡಿಸಿರುವ ಸಂಗತಿಗಳು ನಮಗೆ ಶಾಸನಗಳಿಂದ ದೊರೆಯುತ್ತವೆ. ಯಾವ ಧರ್ಮಗಳು ಪ್ರಬಲವಾಗಿದ್ದವೋ ಆ ಕಾಲಘಟ್ಟಗಳಲ್ಲಿ ಧರ್ಮಕ್ಕೆ ಸಂಬಂಧಿಸಿದ ಸ್ಥಳನಾಮಗಳು ಅಸ್ತಿತ್ವಕ್ಕೆ ಬಂದಿವೆ ಅಂತಹುಗಳೆಂದರೆ, ಲಿಂಗಾಪುರ, ಭೈರನಹಳ್ಳಿ, ಸೋಮನ ಮಲ್ಲಾಪುರ, ರಾಮಪುರ, ಮಾದನಭಾವಿ, ಮಾರಿಕೊಪ್ಪ, ಹಿರೆಮಠ, ಬಳ್ಳೇಶ್ವರ, ಆಂಜನೇಯಪುರ, ಉಜನಿಪುರ, ರಾಜರು, ಸಾಮಂತರು, ಶೌರ್ಯ ಸಾಹಸ ಮತ್ತು ದಕ್ಷತೆಗಳಿಂದ ರಾಜ್ಯಭಾರ ಮಾಡಿ ಜನರ ಪ್ರೀತಿ ವಿಶ್ವಾಸಗಳಿಸಿದ ಸಂಕೇತವಾಗಿ ಸ್ಥಳನಾಮಗಳು ಬಂದಿವೆ ಉದಾ: ರಾಂಪುರ, ಬೆಳಗುತ್ತಿ. ರಾಜರುಗಳು ತಮ್ಮ ಅಧೀನ ದಲ್ಲಿರುವ ವಿಶಾಲ ಪ್ರದೇಶಗಳನ್ನ ನೋಡಿಕೊಳ್ಳಲು ರಾಜ್ಯಪಾಲ, ಮಾಂಡಲೀಕ, ಪ್ರಾಂತ್ಯಾಧಿಕಾರಿ, ಮುಂತಾದವರುಗಳನ್ನ ನೇಮಿಸಿ ಗ್ರಾಮ, ಹಳ್ಳಿ, ಪುರ, ನಗರ ಭಾಗಗಳನ್ನ ಮಾಡಿ ಅವುಗಳ ಆಡಳಿತವನ್ನು ತಮ್ಮ ಸರಹದ್ದಿಗೆ ತರುವ ದೃಷ್ಟಿಇಟ್ಟುಕೊಂಡಿದ್ದರು. ಅಂತಹ ವಾಸದ ನೆಲೆಗಳಿಗೆ ಅಲ್ಲಿಯ ಪ್ರಾದೇಶಿಕ ಲಕ್ಷಣ ಸೂಚಕ ನಿರ್ದಿಷ್ಟ ಘಟಕ ಬೆರೆತು ಸ್ಥಳನಾಮ ರೂಪ ಪಡೆದ ತಾಲ್ಲೂಕಿನ ಆಡಳಿತಾತ್ಮಕ ಸ್ಥಳನಾಮಗಳೆಂದರೆ ಮಾದಾಪುರ, ಬೆಳಗುತ್ತಿ, ಮಲ್ಲಾಪುರ, ಫಲವನಹಳ್ಳಿ, ದೊಡ್ಡೇರಿ, ಬುಳ್ಳಾಪುರ, ಘಂಟ್ಯಾಪುರ, ಇಸ್ಲಾಪುರ. ಇತ್ಯಾದಿ.

**ಪರಾಮರ್ಶನ ಗ್ರಂಥಗಳು**


1. ಟಿ.ಗಿರಿಜಾ,–ದಾವಣಗೆರೆ ಇದು ನಮ ್ಮಜಿಲ್ಲೆ– ನಿಹಾರಿಕ ಪ್ರಕಾಶನ, ದಾವಣಗೆರೆ, ೨೦೦೧.
2. ಬಸವರಾಜಪ್ಪ ಜೆ.ಎನ್– ಶ್ರೀ ತೀರ್ಥರಾಮೇಶ್ವರ ಕ್ಷೇತ್ರ ಇತಿಹಾಸ – ಬಸವತ್ರಯ ಪ್ರಕಾಶನ, ಬೆಳಗುತ್ತಿ, ೧೯೯೫.
3. ಜಯದೇವಪ್ಪ ಜೈನಕೇರಿ–ನ್ಯಾಮತಿಯ ಅಪೂರ್ವ ಗೋಸಾಸನಗಳು ಒಂದು ಹೊಸ ಶೋಧ ಇತಿಹಾಸ ದರ್ಶನ (ಸಂ–೧೩), ೧೯೯೮.
4. ಹಾ.ಮ. ನಾಯಕ–ಕನ್ನಡ ವಿಷಯ ವಿಶ್ವಕೋಶ –ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯.
5. ರಾಜಾರಾಮ ಹೆಗಡೆ ಮತ್ತು ಅಶೋಕ ಶೆಟ್ಟರ್– ಮಲೆಕರ್ನಾಟಕದ ಅರಸು ಮನೆತನಗಳು, ಇದರಲ್ಲಿ ಬೆಳಗುತ್ತಿ ಸಿಂದರು :ಜಗದೀಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ೨೦೦೧.ಪು. ೧೦೯–೧೨೫
6. ಶಿವತಾರಕ್ ಕೆ.ಬಿ.–ಕರ್ನಾಟಕ ಪುರಾತತ್ವ ನೆಲೆಗಳು, ಹೊನ್ನಾಳಿ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೧. ಪು. ೩೩೩–೩೪೨.
7. ಚನ್ನಬಸಯ್ಯ ಹಿರೆಮಠ–ಕುರುಗೋಡ ಸಿಂದರು– ಒಂದು ಅಧ್ಯಯನ ಬೆಳಗುತ್ತಿ ಸಿಂದರು : ಸಂಗಣ್ಣನವರು ಅಂಗಡಿ ಸಂಸ್ಕೃತಿ ಪ್ರತಿಷ್ಠಾನ,ಕೊಪ್ಪಳ,– ೧೯೯೫,
8. ಎಂ ಚಿದಾನಂದಮೂರ್ತಿ– ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ –ಮೈಸೂರು ವಿಶ್ವ ವಿದ್ಯಾಲಯ
9. ಡಾ. ಎಂ.ಎಂ. ಕಲ್ಬುರ್ಗಿ–ಕನ್ನಡ ನಾಮ ವಿಜ್ಞಾನ– ಸಪ್ನ ಬುಕ್ ಹೌಸ್–ಬೆಂಗಳೂರು– ೧೯೮೭
10. ದೇ.ಜ.ಗೌ –ಸ್ಥಳನಾಮ ವ್ಯಾಸಂಗ –ಸಹ್ಯಾದ್ರಿ ಪ್ರಕಾಶನ–೧೯೯೦
11. ಡಾ ಕೊಟ್ರೇಶ ನಾ ಉತ್ತಂಗಿ–ಹೊನ್ನೆಲೆಗಳು– ಸಹನಾದ್ರಿ–೨೦೦೧
12. ಕನ್ನಡ ಸಾಹಿತ್ಯ ಪರಿಷತ್ –ಕನ್ನಡ ನಿಘಂಟು ೮ ಸಂಪುಟಗಳು–ಬೆಂಗಳೂರು–೧೯೭೧